ರಾಜ್ಯದಲ್ಲಿ ಪುರಸಭೆ ಶಾಲೆಗಳಿಗೆ ಶಿಕ್ಷಕರನ್ನು ನೇಮಿಸುವ ಬಗ್ಗೆ

೧೩೬೯. ಶ್ರೀಮತಿ ಸುಮಾವಸಂತ್ (**ವಿರಾಜಪೇಟೆ**).—ಮಾನ್ಯ ನಗರಾಭಿವೃದ್ಧಿ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ರಾಜ್ಯ ಪುರಸಭೆ ಶಾಲೆಗಳಿಗೆ ಶಿಕ್ಷಕರನ್ನು ನೇಮಿಸುವಾಗ ಅನುಸರಿಸುವ ಕ್ರಮವೇನು ?

ಆ) ನೇಮಕ ಮಾಡುವ ಇಲಾಖೆ ಹಾಗೂ ಅಧಿಕಾರಿಗಳು ಯಾರು ?

ಇ) ಹೀಗೆ ನೇಮಕಗೊಂಡ ಶಿಕ್ಷಕರುಗಳಿಗೆ ವರ್ಷಾನುಗಟ್ಟಲೆ ಸಂಬಳ ಸಿಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ವಿರಾಜಪೇಟೆ ಪುರಸಭೆಯ ಶಾಲೆಯೊಂದರಲ್ಲಿ ಈ ರೀತಿ ನಡೆದಿರುವ ವಿಚಾರ ಸರಕಾರದ ಗಮನಕ್ಕೆ ಬಂದಿದೆಯೇ ?

ಉ) ಬಂದಿದ್ದಲ್ಲಿ ಅದರ ಬಗ್ಗೆ ತೆಗೆದುಕೊಂಡು ಕ್ರಮವೇನು ?

ಶ್ರೀ ಎ. ಲಕ್ಷ್ಮೀಸಾಗರ್(ಕಾನೂನು, ಸಂಸದೀಯ ವ್ಯವಹಾರ ಮತ್ತು ನಗರಾಭಿವೃದ್ಧಿ ಸಚಿವರು)—

ಅ) ೧೯೭೧ರ ಕರ್ನಾಟಕ ಪುರಸಭೆಗಳು (ಅಧಿಕಾರಿಗಳ ಮತ್ತು ನೌಕರರ ನೇಮಕಾತಿ) ನಿಯಮಾವಳಿ ಅನ್ವಯ ನಗರ. ಪುರಸಭೆಗಳಲ್ಲಿ ಅಧಿಕಾರಿಗಳ ಮತ್ತು ನೌಕರರ ನೇಮಕಾತಿ ಮಾಡಲಾಗುತ್ತಿದೆ.

ಆ) ೫೯೦-೫೫೦ ರೂ.ಗಳ ಮತ್ತು ೪೧೦-೭೦೦ರೂ.ಗಳ ವೇತನದ ಹುದ್ದೆಗಳಿಗೆ ಸಂಬಂದಿಸಿದ ನಗರ. ಪುರಸಭೆಗಳು ೪೯೦-೯೫೦ರೂ.ಗಳ ೫೫೦-೧೦೫೦ರೂ.ಗಳ ಮತ್ತು ೬೩೦-೧೨೦೦ ರೂ.ಗಳ ವೇತನ ಹುದ್ದೆಗಳಿಗೆ ನಗರ ಸಭೆಗಳಿಗಾದರೆ ವಿಭಾಗಾಧಿಕಾರಿಗಳು ಪುರಸಭೆಗಳಿಗಾದರೆ ಜಿಲ್ಲಾಧಿಕಾರಿಗಳು ಮೇಲ್ಕಂಡ, ನಿಯಮಾವಳಿಯಂತೆ ನೇಮಕಾತಿ ಪ್ರಾಧಿಕಾರಿಗಳಾಗಿದ್ದಾರೆ.

ಇ) ಈವರೆವಿಗೂ ಬಂದಿರಲಿಲ್ಲ.

ಈ) ಈ ಪ್ರಶ್ನೆ ಕೇಳಿದ ನಂತರ ಸರ್ಕಾರದ ಗಮನಕ್ಕೆ ಬಂದಿದೆ.

ಉ) ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಕೈಗಾರಿಕಾ ವಿವಾದ ಕಾನೂನಿನ ಬಗ್ಗೆ ಇತ್ತೀಚಿನ ನ್ಯಾಯಾಲಯದ ತೀರ್ಪು

೧೩೪೧. ಶ್ರೀ ಎಂ. ಎಸ್. ಕೃಷ್ಣನ್ (**ರಾಜಾಜಿನಗರ**).—ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಕೈಗಾರಿಕಾ ವಿವಾದ ಕಾನೂನಿನ ವಿಧಿ ೨೫-೦ ಅನ್ನು ನ್ಯಾಯಾಧೀಶ ಶ್ರೀ ರಾಮಜೋಯಿಸ ರವರು ರದ್ದು ಮಾಡಿ ತೀರ್ಪನ್ನಿತ್ತಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ?

ಆ) ಈ ತೀರ್ಪಿನಿಂದಾಗಿ ರಾಜ್ಯದ ಕಾರ್ಮಿಕ ವರ್ಗದ ಹಿತಕ್ಕೆ ಧಕ್ಕೆ ಬಂದಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ?

ಇ) ಕಾರ್ಮಿಕ ವರ್ಗಕ್ಕೆ ನ್ಯಾಯ ದೊರಕಿಸಿಕೊಡಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಈ) ಅತಿ ಮುಖ್ಯವಾದ ಸಂವಿಧಾನಕ್ಕೆ ಸಂಬಂಧಪಟ್ಟ ವಿಷಯಗಳು ಅಡಕವಾಗಿರುವುದರಿಂದ ಹಾಗೂ ಮಾಲೀಕರು ಕೆಲವು ಖ್ಯಾತ ವಕೀಲರನ್ನು ತಮ್ಮ ಪರವಾಗಿ ವಾದ ಮಾಡಲು ಕಾರ್ಮಿಕರಿಗೆ ನ್ಯಾಯ ದೊರಕದಂತಾಗಲು ನೇಮಕ ಮಾಡುತ್ತಿರುವುದರಿಂದ ಈ ಸವಾಲನ್ನೆದುರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಡಿ. ಮಂಜುನಾಥ್ (ಕಾರ್ಮಿಕ ಮಂತ್ರಿಗಳು).—

ಅ) ಹೌದು.

ಆ) ಹೌದು.

ಇ) ಸರ್ಕಾರ ರಾಜ್ಯದ ಉಚ್ಚ ನ್ಯಾಯಾಲಯದ ಡಿವಿಜನ್ ಬೆಂಚ್ ಮುಂದೆ ಏಕ ನ್ಯಾಯಾಧೀಶರ ತೀರ್ಮಾನವನ್ನು ತಡೆಹಾಕಬೇಕೆಂದು ಕೋರಿ ಒಂದು ರಿಟ್ ಅಪೀಲನ್ನು ಸಲ್ಲಿಸಿದೆ. ಏಕ ನ್ಯಾಯಾಧೀಶರ ತೀರ್ಮಾನವನ್ನು ಡಿವಿಜನ್ ಬೆಂಚ್ ತಡೆಹಿಡಿದಿದೆ.

ಈ) ಸರ್ಕಾರದ ಪರವಾಗಿ ವಾದ ಮಾಡಲು ಅಡ್ವೊಕೇಟ್ ಜನರಲ್ ಮತ್ತು ಉಚ್ಚ ನ್ಯಾಯಾಲಯದ ಸರಕಾರಿ ವಕೀಲರಿದ್ದಾರೆ. ಅವಶ್ಯವಿದ್ದರೆ ಹೆಚ್ಚಿನ ಸಂಭಾವನೆ ಕೊಟ್ಟು ಪ್ರಸಿದ್ಧ ನ್ಯಾಯವಾದಿಗಳನ್ನು ಸರ್ಕಾರ ನೇಮಿಸುತ್ತದೆ. ಭಾರತೀಯ ಸಂವಿಧಾನದ ಪರಿಚ್ಛೇದ ೧೯(೨) (ಜಿ)ಯಂತೆ ಮೂಲಭೂತ ಹಕ್ಕು ನೀಡಿದೆ. ರಾಜ್ಯ ಸರ್ಕಾರದ ಮನವಿಯ ಮೇಲೆ ಏಕ ನ್ಯಾಯಾಧೀಶರ ಆಜ್ಞೆಯಂತೆ ತಡೆಹಿಡಿಯಲಾಗಿದ್ದು, ಉಚ್ಚ ನ್ಯಾಯಾಲಯದ ಡಿವಿಜನ್ ಬೆಂಚ್‌ನ ತೀರ್ಮಾನವನ್ನು ಕಾಯಲಾಗುತ್ತಿದೆ.

ಮೈಸೂರು ಕ್ರೋಂ ಟಾನಿಂಗ್ ಕಂಪನಿಯ ಉತ್ಪಾದನೆಯ ಬಗ್ಗೆ

೧೨೪೩. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮೈಸೂರು ಕ್ರೋಂ ಟಾನಿಂಗ್ ಕಂಪನಿಯಲ್ಲಿ ಉತ್ಪಾದನೆ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಕಳೆದ ಮೂರು ವರ್ಷಗಳ ಉತ್ಪಾದನೆಯ ಹಾಗೂ ೧೯೮೫-೮೬ರ ಪ್ರತಿ ತಿಂಗಳ ಉತ್ಪಾದನೆ ವಿವರ ಒದಗಿಸುವುದು?.

ಇ) ಸದರಿ ಕಂಪನಿಯು ಅಭಿವೃದ್ಧಿಗೊಳ್ಳಲು ತಯಾರಿ ಮಾಡುವ ವಸ್ತುಗಳಿಂ ಮಾರಾಟವಾಗಲು ಸ್ಪಾಟಿಸ್ಟ್ ಇದ್ದಾರೆಯೇ ?

ಈ) ಈ ಕಂಪನಿಯ ಪುನಶ್ಚೇತನಕ್ಕೆ ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್‌ರವರು ಕಾರ್ಯಕ್ರಮಕ್ಕೆ ಗೊಳ್ಳಬೇಕೆಂದು ಸರ್ಕಾರದವರು ಆದೇಶವಿತ್ತಿದ್ದಾರೆಯೇ ? ಹಾಗಿದ್ದಲ್ಲಿ ಆದೇಶಗಳೇನು ? ಮತ್ತು ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್‌ರವರು ಕೈಗೊಂಡಿರುವ ಕಾರ್ಯಕ್ರಮಗಳೇನು ?

ಶ್ರೀ ಜೆ. ಹೆಚ್. ಪಟೇಲ್(ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು).—

ಅ) ಬಂದಿದೆ.

ಆ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಇಲ್ಲ.

ಈ) ಈ ಕಂಪನಿಯನ್ನು ಪುನಶ್ಚೇತನಗೊಳಿಸುವುದಕ್ಕಾಗಿ ಸರ್ಕಾರಿ ಆದೇಶ ಸಂಖ್ಯೆ ಸಿಐ ೭ ಸಿಎಂಬಿಪಿ ದಿನಾಂಕ ೨೦-೧೧-೧೯೮೫ರಲ್ಲಿ ಇದನ್ನು ಮೈಸೂರ್ ಸೇಲ್ಸ್ ಇಂಟರ್ ನ್ಯಾಷನಲ್ ಲಿಮಿಟೆಡ್‌ನ ಅಂಗ ಸಂಸ್ಥೆಯಾಗಿ ಪರಿವರ್ತಿಸಲಾಗಿದೆ. ಹಾಗೂ ಇದೇ ಸಂಖ್ಯೆಯ ದಿನಾಂಕ ೧೦-೧೦-೮೬ರ ಆಜ್ಞೆಯಲ್ಲಿ ಈ ಕಂಪನಿಯಲ್ಲಿ ಸರ್ಕಾರವು ಹೊಂದಿದ್ದ ೪೦ ಲಕ್ಷರೂ. ಗಳ ಷೇರುಗಳನ್ನು ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಲಿಮಿಟೆಡ್‌ಗೆ ವರ್ಗಾಯಿಸಲಾಗಿದೆ. ೧೫-೧೦-೮೬ರ ತನಕ ಮೈಸೂರ್ ಸೇಲ್ಸ್ ಇಂಟರ್ ನ್ಯಾಷನಲ್ಸ್ ಲಿಮಿಟೆಡ್, ಮೈಸೂರ್ ಕ್ರೋಂ ಟಾನಿಂಗ್ ಕಂಪನಿಗೆ ೬೨.೮೧ ಲಕ್ಷ ರೂ.ಗಳ ಮುಂಗಡವನ್ನು ನೀಡಿದೆ ಮತ್ತು ಬ್ಯಾಂಕುಗಳಿಂದ ಪಡೆಯಲಾದ ೫೮. ೫೦ ಲಕ್ಷ ರೂ.ಗಳ ಸಾಲಕ್ಕೆ ಖಾತರಿಯನ್ನು ನೀಡಿದೆ.